

## 12

# ಹಸಿವಿನ ತಾಂಡವ

ವಿಶ್ವ ಮಟ್ಟದಲ್ಲಿ ಭಾರತ ಪ್ರಬಲ ಶಕ್ತಿಯಾಗಿ ಗುರ್ತಿಸಿಕೊಳ್ಳಲು ಹಂಬಲಿಸುತ್ತಿರುವ ಸಂದರ್ಭದಲ್ಲಿ ಪ್ರಕಟವಾದ, ದಕ್ಷಿಣ ಏಷ್ಯಾ ಮತ್ತು ‘ಬ್ರಿಕ್ಸ್’ ದೇಶಗಳಲ್ಲಿ ಹಸಿವಿನಿಂದ ಬಳಲುತ್ತಿರುವ ಅತ್ಯಂತ ಹೆಚ್ಚು ಜನರು ಭಾರತದಲ್ಲಿದ್ದಾರೆ ಎನ್ನುವ ಸುದ್ದಿಯು ಬೇರೆಯದೇ ಕಥೆ ಹೇಳುವಂತಿದೆ. ‘ಕನ್ಸರ್ನ್ ವರ್ಲ್ಡ್‌ವೈಡ್’ ಮತ್ತು ‘ವೆಲ್ತ್ ಹಂಗರ್ ಹಿಲ್ಫ಼ಿ’ ಎನ್ನುವ ಸಂಸ್ಥೆಗಳು ಸಿದ್ಧಪಡಿಸಿರುವ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ 102ನೇ ಸ್ಥಾನದಲ್ಲಿದೆ. ಅಪೌಷ್ಟಿಕತೆ, ಮಕ್ಕಳ ಕುಂಠಿತ ಬೆಳವಣಿಗೆ, ಕಡಿಮೆ ತೂಕದ ಮಕ್ಕಳು ಹಾಗೂ ಶಿಶುಮರಣದ ಪ್ರಮಾಣವನ್ನು ಆಧರಿಸಿ ಈ ಸೂಚ್ಯಂಕವನ್ನು ರೂಪಿಸಲಾಗಿದೆ. ಶಿಶುಮರಣ ಪ್ರಮಾಣ ದೇಶದಲ್ಲಿ ಶೇ 3.9ರಷ್ಟಿದ್ದರೆ, ಬೆಳವಣಿಗೆ ಕುಂಠಿತವಾದ ಮಕ್ಕಳ ಸಂಖ್ಯೆ ಶೇ 37.8ರಷ್ಟಿದೆ. ನೂರಕ್ಕೆ ಸುಮಾರು 15 ಮಂದಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದು, 6ರಿಂದ 23 ತಿಂಗಳವರೆಗಿನ ಶೇ 9.6 ಮಕ್ಕಳಿಗೆ ಕನಿಷ್ಠ ಆಹಾರ ದೊರೆಯುತ್ತಿದೆ. ‘ವಿಶ್ವ ಹಸಿವು ಸೂಚ್ಯಂಕ’ ಪಟ್ಟಿಯಲ್ಲಿ ಭಾರತ 2015ರಲ್ಲಿ 93ನೇ ಸ್ಥಾನ ಹಾಗೂ 2018ರಲ್ಲಿ 103ನೇ ಸ್ಥಾನದಲ್ಲಿತ್ತು. 2015ಕ್ಕೆ ಹೋಲಿಸಿದರೆ ಈಗ ಒಂಬತ್ತು ಸ್ಥಾನಗಳಷ್ಟು ಕುಸಿತ ಕಂಡಿರುವುದು ಆತಂಕಕ್ಕೆಡೆ ಮಾಡುವ ಸಂಗತಿ. ಇದೇ ಸೂಚ್ಯಂಕದಲ್ಲಿ 2000 ಇಸವಿಯಲ್ಲಿ ಭಾರತ 83ನೇ ಸ್ಥಾನದಲ್ಲಿತ್ತು ಎನ್ನುವುದನ್ನು ಪರಿಗಣಿಸಿದರೆ ಎರಡು ದಶಕಗಳಲ್ಲಿ ನಾವು ಸಾಧಿಸಿರುವ ಅಭಿವೃದ್ಧಿಯ ಅಸಲಿಯತ್ತಿನ ಬಗ್ಗೆಯೇ ಗಂಭೀರ ವಿಮರ್ಶೆ ನಡೆಯಬೇಕಿದೆ. ನೆರೆಯ ಪಾಕಿಸ್ತಾನ (94), ಬಾಂಗ್ಲಾದೇಶ (88), ನೇಪಾಳ (73) ಶ್ರೀಲಂಕಾ (66) ಹಾಗೂ ಚೀನಾ (25) ಭಾರತಕ್ಕಿಂತಲೂ ಉತ್ತಮ ಸ್ಥಾನದಲ್ಲಿರುವುದು ಗಮನಾರ್ಹ.

## 13

# ಅತ್ಯಾಚಾರ
## ಬೆಚ್ಚಿ ಬಿದ್ದ ಭಾರತ

ದೆಹಲಿಯ ‘ನಿರ್ಭಯಾ’ ಪ್ರಕರಣವನ್ನು ನೆನಪಿಸುವಂತಹ ಅತ್ಯಾಚಾರ ಪ್ರಕರಣ ಕಳೆದ ನ. 27ರಂದು ಹೈದರಾಬಾದ್‌ನಲ್ಲಿ ನಡೆದಿದೆ. 26 ವರ್ಷದ ಪಶು ವೈದ್ಯೆಯೊಬ್ಬಳ ಮೇಲೆ ಅತ್ಯಾಚಾರ ನಡೆಸಿ ದಹಿಸಿದ ಘಟನೆ ಅಂತರರಾಷ್ಟ್ರೀಯ ಗಮನಸೆಳೆದಿತ್ತು. ಆ ಪ್ರಕರಣದ ನಾಲ್ವರು ಆರೋಪಿಗಳು ಡಿ. 6ರಂದು ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾದ ಸುದ್ದಿ ಕೂಡ ಚರ್ಚೆಗೆ ಕಾರಣವಾಗಿದೆ. ತೆಲಂಗಾಣದ ಘಟನೆಯ ಬೆನ್ನಿಗೇ ಅಪ್ರಾಪ್ತೆಯೊಬ್ಬಳ ಮೇಲೆ ಆಕೆಯ ಗೆಳೆಯರೇ ಅತ್ಯಾಚಾರ ನಡೆಸಿದ ಭೀಕರ ಘಟನೆ ತ್ರಿಪುರಾದಿಂದ ವರದಿಯಾಗಿದೆ. ಬಾಲಕಿಯನ್ನು ಸೆರೆಯಲ್ಲಿರಿಸಿ, ನಾಲ್ಕು ದಿನಳ ಕಾಲ ಅತ್ಯಾಚಾರ ನಡೆಸಿದ ಜೀವಂತವಾಗಿ ದಹಿಸಿ ಕೊಂದಿದ್ದಾರೆ. ಹೈದರಾಬಾದ್‌ನ ಪ್ರಕರಣ ಸುದ್ದಿಯಲ್ಲಿರುವ ಸಂದರ್ಭದಲ್ಲೇ ಉತ್ತರ ಪ್ರದೇಶದ ಉನ್ನಾವೋದಲ್ಲಿ ಸಂತ್ರಸ್ತೆಯ ಮೇಲೆ ಅತ್ಯಾಚಾರ ಆರೋಪಿಯೇ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಂದ ಪೈಶಾಚಿಕತೆಗೂ ವರ್ಷಾಂತ್ಯ ಸಾಕ್ಷಿಯಾಗಿದೆ.

ಭಾರತದಲ್ಲಿ ಪ್ರತಿ ನಾಲ್ಕು ಗಂಟೆಗೆ ಒಂದರಂತೆ, ಪ್ರತಿ ವರ್ಷ 3.5 ಲಕ್ಷ ಅತ್ಯಾಚಾರಗಳು ನಡೆಯುತ್ತವೆ ಹಾಗೂ ಶೇ. 96ರಷ್ಟು ಅತ್ಯಾಚಾರಗಳು ಪರಿಚಯದವರಿಂದಲೇ ನಡೆಯುತ್ತವೆ ಎನ್ನುವುದು ನಮ್ಮ ಸಮಾಜದ ಅನಾರೋಗ್ಯವನ್ನು ಸೂಚಿಸುವಂತಿದೆ.



## 14

# ಗಾಂಧಿ 150

ಮಾನವೀಯತೆಯ ರೂಪಕ ಎಂದು ಮನುಕುಲ ಗೌರವಿಸುವ ಮಹಾತ್ಮ ಗಾಂಧೀಜಿಯವರ 150ನೇ ವರ್ಷಾಚರಣೆ (ಜನನ: 1869) ಭಾರತ ಸೇರಿದಂತೆ ವಿಶ್ವದ ಅನೇಕ ಭಾಗಗಳಲ್ಲಿ ನಡೆದುದು 2019ರ ಹೃದ್ಯ ಸಂಗತಿಗಳಲ್ಲೊಂದು. ಭಯೋತ್ಪಾದನೆ ಕೃತ್ಯಗಳು ಹಾಗೂ ಹಸಿವು, ವರ್ಣ–ಲಿಂಗ ತಾರತಮ್ಯ ಘಟನೆಗಳ ನಡುವೆಯೂ ಗಾಂಧಿಯ ನೆನಪು ಹೊಸ ತಲೆಮಾರಿಗೆ ಅಗತ್ಯವಾದ ಮಾದರಿಯೊಂದನ್ನು ಒದಗಿಸುವಂತಿದೆ. ಸಮಕಾಲೀನ ತವಕ ತಲ್ಲಣಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ‘ಗಾಂಧಿ 150ರ ನೆನಪು’ ಬಹುಮುಖ್ಯವಾದುದು. ಈ ಸಂಭ್ರಮದ ಆಚರಣೆಯ ನಿಮಿತ್ತ ಭಾರತದಲ್ಲಿ ಎಲ್ಲ ರಾಜ್ಯ–ಭಾಷೆಗಳಲ್ಲಿ ವಿಚಾರಸಂಕಿರಣಗಳು, ಗಾಂಧಿ ಕುರಿತ ಪುಸ್ತಕಗಳ ಪ್ರಕಟಣೆಗಳು ನಡೆದಿವೆ.